Kerala Gazette No. 32 dated 11th August 2020.

**PART I** **Section iii**

# ಕೇರಳ ಸರಕಾರ

## ಕಾನೂನು (ಶಾಸನ ರಚನೆ-ಜಿ) ಇಲಾಖೆ

## ಅಧಿಸೂಚನೆ

*2018 ಫೆಬ್ರವರಿ 12,*

ನಂಬ್ರ 14662/ಲೆಗ್. ಜಿ2/2017/ಕಾನೂನು. *ತಿರುವನಂತಪುರಂ,* *1193 ಮಕರ 29/*

*1939 ಮಾಘ 23.*

2018 ಫೆಬ್ರವರಿ 12ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದಂತಹ ಈ ಕೆಳಗಿನ ಅಧ್ಯಾದೇಶವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

*ಕಾನೂನು ಕಾರ್ಯದರ್ಶಿ.*

## 2018ರ 14ನೇ ನಂಬ್ರ ಅಧ್ಯಾದೇಶ

## 2018ರ ಕೇರಳ ರಾಜ್ಯ ಉನ್ನತ ವಿದ್ಯಾಭ್ಯಾಸ ಪರಿಷತ್ತು (ತಿದ್ದುಪಡಿ) ಅಧ್ಯಾದೇಶ

ಭಾರತ ಗಣರಾಜ್ಯದ ಅರುವತ್ತೊಂಭತ್ತನೇ ವರ್ಷದಲ್ಲಿ ಕೇರಳ ರಾಜ್ಯಪಾಲರಿಂದ ಪ್ರಖ್ಯಾಪಿಸಲ್ಪಟ್ಟಿತು.

2007ರ ಕೇರಳ ರಾಜ್ಯ ಉನ್ನತ ವಿದ್ಯಾಭ್ಯಾಸ ಪರಿಷತ್ತು ಅಧಿನಿಯಮವನ್ನು
ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧ್ಯಾದೇಶ

ಪೀಠಿಕೆ.—2017ರ ಕೇರಳ ರಾಜ್ಯ ಉನ್ನತ ವಿದ್ಯಾಭ್ಯಾಸ ಪರಿಷತ್ತು (ತಿದ್ದುಪಡಿ) ಅಧ್ಯಾದೇಶ (2017ರ 13)ವು 2017ರ ಜುಲೈ 5ನೇ ದಿನಾಂಕದಂದು ಕೇರಳ ರಾಜ್ಯಪಾಲರಿಂದ ಪ್ರಖ್ಯಾಪಿಸಲ್ಪಟ್ಟರೂ;

ಹಾಗೂ ಪ್ರಸ್ತುತ ಅಧ್ಯಾದೇಶವನ್ನು ರಾಜ್ಯ ವಿಧಾನಸಭೆಯ ಒಂದು ಅಧಿನಿಯಮದ ಮೂಲಕ ಮಂಜೂರು ಮಾಡಲು ಒಂದು ಮಸೂದೆಯನ್ನು ಮಂಡಿಸಲು ಹಾಗೂ ಮಂಜೂರು ಮಾಡಲು 2017 ಆಗಸ್ಟ್ 7ರಂದು ಪ್ರಾರಂಭಗೊಂಡು 2017 ಆಗಸ್ಟ್ 24ರಂದು ಅಂತ್ಯಗೊಂಡ ಕೇರಳ ವಿಧಾನಸಭೆಯ ಅಂದಿನ ಅಧಿವೇಶನದಲ್ಲಿ ಸಾಧ್ಯವಾಗದಿರುವುದರಿಂದಲೂ;

ಹಾಗೂ ಪ್ರಸ್ತುತ ಅಧ್ಯಾದೇಶದ ಉಪಬಂಧಗಳನ್ನು ಊರ್ಜಿತದಲ್ಲಿರಿಸಲು ಕೇರಳ ರಾಜ್ಯ ಉನ್ನತ ವಿದ್ಯಾಭ್ಯಾಸ ಪರಿಷತ್ತು (ತಿದ್ದುಪಡಿ) ಅಧ್ಯಾದೇಶ (2017ರ 20)ವು 2017ರ ಸೆಪ್ಟಂಬರ್ 16ನೇ ದಿನಾಂಕದಂದು ಕೇರಳ ರಾಜ್ಯಪಾಲರಿಂದ ಪ್ರಖ್ಯಾಪಿಸಲ್ಪಟ್ಟರೂ;

ಹಾಗೂ, 2017ರ 20ನೇ ನಂಬ್ರ ಅಧ್ಯಾದೇಶವನ್ನು ವಿಧಾನಸಭೆಯ ಒಂದು ಅಧಿನಿಯಮದ ಮೂಲಕ ಮಂಜೂರು ಮಾಡಲು ಒಂದು ಮಸೂದೆಯನ್ನು ಮಂಡಿಸಲು ಹಾಗೂ ಮಂಜೂರು ಮಾಡಲು 2017 ನವೆಂಬರ್ 9ರಂದು ಪ್ರಾರಂಭಗೊಂಡು ಅದೇ ದಿನದಂದು ಅಂತ್ಯಗೊಂಡ ಕೇರಳ ವಿಧಾನಸಭೆಯ ಅಂದಿನ ಅಧಿವೇಶನದಲ್ಲಿ ಸಾಧ್ಯವಾಗದಿರುವುದರಿಂದಲೂ;

ಹಾಗೂ ಪ್ರಸ್ತುತ ಅಧ್ಯಾದೇಶದ ಉಪಬಂಧಗಳನ್ನು ಊರ್ಜಿತದಲ್ಲಿರಿಸಲು ಕೇರಳ ರಾಜ್ಯ ಉನ್ನತ ವಿದ್ಯಾಭ್ಯಾಸ ಪರಿಷತ್ತು (ತಿದ್ದುಪಡಿ) ಅಧ್ಯಾದೇಶ (2017ರ 37)ವು 2017ರ ಡಿಸೆಂಬರ್ 21ನೇ ದಿನಾಂಕದಂದು ಕೇರಳ ರಾಜ್ಯಪಾಲರಿಂದ ಪ್ರಖ್ಯಾಪಿಸಲ್ಪಟ್ಟರೂ;

ಹಾಗೂ, 2017ರ 37ನೇ ನಂಬ್ರ ಅಧ್ಯಾದೇಶವನ್ನು ವಿಧಾನಸಭೆಯ ಒಂದು ಅಧಿನಿಯಮದ ಮೂಲಕ ಮಂಜೂರು ಮಾಡಲು ಒಂದು ಮಸೂದೆಯನ್ನು ಮಂಡಿಸಲು ಹಾಗೂ ಮಂಜೂರು ಮಾಡಲು 2018 ಜನವರಿ 22ರಂದು ಪ್ರಾರಂಭಗೊಂಡು 2018 ಫೆಬ್ರವರಿ 7ರಂದು ಅಂತ್ಯಗೊಂಡ ಕೇರಳ ವಿಧಾನಸಭೆಯ ಅಂದಿನ ಅಧಿವೇಶನದಲ್ಲಿ ಸಾಧ್ಯವಾಗದಿರುವುದರಿಂದಲೂ;

ಹಾಗೂ, ಭಾರತ ಸಂವಿಧಾನದ 213ನೇ ಅನುಚ್ಛೇದದ (2)ನೇ ಖಂಡದ (ಎ) ಉಪ-ಖಂಡದ ಪ್ರಕಾರ, 2017ರ ಕೇರಳ ರಾಜ್ಯ ಉನ್ನತ ವಿದ್ಯಾಭ್ಯಾಸ ಪರಿಷತ್ತು (ತಿದ್ದುಪಡಿ) ಅಧ್ಯಾದೇಶ (2017ರ 37)ಕ್ಕೆ 2018 ಮಾರ್ಚ್ 5ನೇ ದಿನಾಂಕದಿಂದ ಪ್ರಾಬಲ್ಯ ಇಲ್ಲದಾಗುವುದರಿಂದಲೂ;

ಹಾಗೂ ಪ್ರಸ್ತುತ ಅಧ್ಯಾದೇಶದ ಉಪಬಂಧಗಳನ್ನು ಊರ್ಜಿತದಲ್ಲಿರಿಸದಿದ್ದಲ್ಲಿ ಸಮಸ್ಯೆಗಳು ಉದ್ಭವಿಸುವುದರಿಂದಲೂ;

ಹಾಗೂ ಕೇರಳ ರಾಜ್ಯ ವಿಧಾನಸಭೆಯು ಅಧಿವೇಶನದಲ್ಲಿಲ್ಲದಿರುವುದರಿಂದಲೂ ಹಾಗೂ ತಾನು ತುರ್ತುಕ್ರಮವನ್ನು ಕೈಗೊಳ್ಳಲು ಅಗತ್ಯವಾದ ಸನ್ನಿವೇಶವು ಅಸ್ತಿತ್ವದಲ್ಲಿದೆಯೆಂದು ಕೇರಳ ರಾಜ್ಯಪಾಲರಿಗೆ ಮನವರಿಕೆಯಾಗಿರುವುದರಿಂದಲೂ;

ಈಗ, ಆದುದರಿಂದ, ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದ ಪ್ರಕಾರ ನೀಡಲ್ಪಟ್ಟ ಅಧಿಕಾರಗಳನ್ನು ವಿನಿಯೋಗಿಸಿ, ಕೇರಳ ರಾಜ್ಯಪಾಲರು ಈ ಕೆಳಗಿನ ಅಧ್ಯಾದೇಶವನ್ನು ಪ್ರಖ್ಯಾಪಿಸಲು ಇಚ್ಛಿಸುತ್ತಾರೆ:—

1. ಸಂಕ್ಷಿಪ್ತ ನಾಮ ಮತ್ತು ಪ್ರಾರಂಭ.—(1) ಈ ಅಧ್ಯಾದೇಶವನ್ನು 2018ರ ಕೇರಳ ರಾಜ್ಯ ಉನ್ನತ ವಿದ್ಯಾಭ್ಯಾಸ ಪರಿಷತ್ತು (ತಿದ್ದುಪಡಿ) ಅಧ್ಯಾದೇಶ ಎಂದು ಕರೆಯಬಹುದು.

(2) ಇದು 2017 ಜುಲೈ 5ರಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 2007ರ 22ನೇ ಅಧಿನಿಯಮವನ್ನು ತಾತ್ಕಾಲಿಕವಾಗಿ ತಿದ್ದುಪಡಿಮಾಡಲಾಗುವುದು.— ಈ ಅಧ್ಯಾದೇಶವು ಜಾರಿಯಲ್ಲಿರುವ ಕಾಲಾವಧಿಯಲ್ಲಿ, 2007ರ ಕೇರಳ ರಾಜ್ಯ ಉನ್ನತ ವಿದ್ಯಾಭ್ಯಾಸ ಪರಿಷತ್ತು ಅಧಿನಿಯಮ (2007ರ 22)ವು (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು) 3ರಿಂದ 18ನೇ ವರೆಗಿನ ವಿಭಾಗದಲ್ಲಿ ನಿರ್ದಿಷ್ಟ ಪಡಿಸುವ ತಿದ್ದುಪಡಿಗೊಳಪಟ್ಟು ಜಾರಿಯಲ್ಲಿರುತ್ತದೆ.

3. ಪೀಠಿಕೆಯ ತಿದ್ದುಪಡಿ.—ಪ್ರಧಾನ ಅಧಿನಿಯಮದ ಪೀಠಿಕೆಯಲ್ಲಿನ ಮೊದಲ ಪ್ಯಾರದಲ್ಲಿ "ತಜ್ಞರು", ಎಂಬ ಪದದ ಜಾಗದಲ್ಲಿ, "ತಜ್ಞರು, ವಿದ್ಯಾರ್ಥಿಗಳು" ಎಂಬ ಪದಗಳು ಹಾಗೂ ಚಿಹ್ನೆಯನ್ನು ಬದಲಿಯಾಗಿ ಸೇರಿಸತಕ್ಕದ್ದು.

4. ನಿರ್ದಿಷ್ಟ ಪದಪ್ರಯೋಗಗಳನ್ನು ಇತರ ನಿರ್ದಿಷ್ಟ ಪದಪ್ರಯೋಗಗಳಿಂದ ಬದಲಿಯಾಗಿ ಸೇರಿಸುವುದು.—ಪ್ರಧಾನ ಅಧಿನಿಯಮದಲ್ಲಿ "ಸಲಹಾ ಪರಿಷತ್ತು", "ಕಾರ್ಯ ನಿರ್ವಾಹಕ ಪರಿಷತ್ತು" ಹಾಗೂ "ಆಡಳಿತ ಪರಿಷತ್ತು" ಎಂಬ ಪದಗಳು ಎಲ್ಲೆಲ್ಲಿ ಬರುತ್ತವೆಯೋ ಅಲ್ಲಿ "ಸಲಹಾ ಮಂಡಳಿ", "ಕಾರ್ಯ ನಿರ್ವಾಹಕ ಮಂಡಳಿ" ಹಾಗೂ "ಆಡಳಿತ ಮಂಡಳಿ" ಎಂಬ ಪದಗಳನ್ನು ಕ್ರಮವಾಗಿ ಬದಲಿಯಾಗಿ ಸೇರಿಸತಕ್ಕದ್ದು.

5. 2ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ ವಿಭಾಗ 2ರಲ್ಲಿ (ಎಸ್) ಖಂಡದ ನಂತರ ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಎಸ್‌ಎ) "ಆರ್‌ಯುಎಸ್‌ಎ" ಎಂದರೆ, ರಾಷ್ಟ್ರೀಯ ಉಚ್ಚತರ್ ಶಿಕ್ಷಾ ಅಭಿಯಾನ್, ಒಂದು ಕೇಂದ್ರ ಪ್ರಾಯೋಜಿತ ಉನ್ನತ ಶಿಕ್ಷಣ ಸ್ಕೀಮ್;".

6. 4ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ ವಿಭಾಗ 4ರಲ್ಲಿ,—

(i) (1)ನೇ ಉಪ-ವಿಭಾಗದ (ಎ) ಖಂಡದ ಜಾಗದಲ್ಲಿ ಈ ಕೆಳಗಿನ ಖಂಡವನ್ನು ಬದಲಿಯಾಗಿ ಸೇರಿಸತಕ್ಕದ್ದು, ಅದೇನೆಂದರೆ:—

"(ಎ) ಪ್ರವೇಶಾವಕಾಶ, ನ್ಯಾಯ ಮತ್ತು ಶೈಕ್ಷಣಿಕ ಗುಣಮಟ್ಟಕ್ಕೆ ಸಂಬಂಧಿಸಿ ಸರಕಾರಕ್ಕೆ, ವಿಶ್ವವಿದ್ಯಾಲಯಗಳಿಗೆ, ಕಾಲೇಜುಗಳಿಗೆ ಹಾಗೂ ರಾಜ್ಯದಲ್ಲಿನ ಇತರ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸಲಹೆ ನೀಡುವುದಕ್ಕೆ;";

(ii) (2)ನೇ ಉಪ-ವಿಭಾಗದ (ವೈ) ಖಂಡದ ನಂತರ, ಈ ಕೆಳಗಿನ ಖಂಡಗಳನ್ನು ಸೇರಿಸತಕ್ಕದ್ದು, ಅವುಗಳೇನೆಂದರೆ:—

"(ಝಡ್) ವಿದ್ಯಾರ್ಥಿ ಕಲಿಕಾ ಪರಿಣಾಮವನ್ನು ತಿಳಿಯಲು ದೀರ್ಘ ಅಧ್ಯಯನವನ್ನು ನಡೆಸುವುದು;

(ಝಡ್‌ಎ) ರಾಜ್ಯದ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಸಕ್ತ ದೇಶಿಜ್ಞಾನ ವ್ಯವಸ್ಥೆಯನ್ನು ಉತ್ತೇಜಿಸುವುದು ಹಾಗೂ ಸಮಗ್ರಗೊಳಿಸುವುದು;

(ಝಡ್ಬಿ) ವಿಕಲ ಚೇತನ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ಪ್ರವೇಶಿಸುವುದನ್ನು ಸುಗಮಗೊಳಿಸಲು ಕಾರ್ಯಕ್ರಮಗಳನ್ನು ವಿಕಸಿಸುವುದು;

(ಝಡ್ಸಿ) ರಾಜ್ಯದೊಳಗೆ ಆರ್‌ಯುಎಸ್‌ಎ ಮತ್ತು ಅದೇ ರೀತಿಯ ಕೇಂದ್ರ ಪ್ರಾಯೋಜಿತ ಸ್ಕೀಮ್‌ಗಳನ್ನು ಹಾಗೂ ಇತರ ಕೇಂದ್ರ ವಲಯದ ಸ್ಕೀಮ್‌ಗಳನ್ನು ಜಾರಿಗೊಳಿಸಲು ಸರಕಾರದೊಂದಿಗೆ ಸಹಭಾಗಿಯಾಗುವುದು;

(ಝಡ್ಡಿ) ಶೈಕ್ಷಣಿಕ ಕಾರ್ಯಕ್ರಮಗಳು, ಅಧ್ಯಯನ ವ್ಯಾಪ್ತಿಗಳು ಮತ್ತು ಅದರ ಪಾರಿಭಾಷಿಕ ಶಬ್ದಕೋಶಗಳ ಪರಸ್ಪರ ಅಂಗೀಕಾರ, ಅನುಮೋದನೆ ಅಥವಾ ಸಮೀಕರಣಕ್ಕಾಗಿ ರಾಜ್ಯದ ವಿಶ್ವವಿದ್ಯಾಲಯಗಳಿಗೆ ಸಾಮಾನ್ಯ ಶೈಕ್ಷಣಿಕ ಮಾರ್ಗಸೂಚಿಗಳನ್ನು ವಿಕಸಿಸುವುದು;

(ಝಡ್ಇ) ರಾಜ್ಯದ ಹೊರಗೆ ಅಥವಾ ದೇಶದ ಹೊರಗೆ ಇರುವಂತಹ ವಿಶ್ವವಿದ್ಯಾಲಯಗಳು ಅಥವಾ ಉನ್ನತ ಶಿಕ್ಷಣ ಸಂಸ್ಥೆಗಳು ನಡೆಸುವಂತಹ ಹಲವಾರು ಕಾರ್ಯಕ್ರಮಗಳ ಪಾರಿಭಾಷಿಕ ಶಬ್ದಕೋಶಗಳಿಗೆ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳು/ಅಧ್ಯಯನ ವ್ಯಾಪ್ತಿಗಳ ಅಂಗೀಕಾರ ಅನುಮೋದನೆ ಅಥವಾ ಸಮೀಕರಣಕ್ಕಾಗಿ ರಾಜ್ಯದ ವಿಶ್ವವಿದ್ಯಾಲಯಗಳಿಗೆ ಸಾಮಾನ್ಯ ಶೈಕ್ಷಣಿಕ ಮಾರ್ಗಸೂಚಿಗಳನ್ನು ವಿಕಸಿಸುವುದು;

(ಝಡ್ಎಫ್) ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮಗಳ ಮೂಲಕ ಪ್ರೇಕ್ಷಕರನ್ನು ಗುರಿಯಿರಿಸಿ ಉನ್ನತ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಜ್ಞಾನದ ಪ್ರಸಾರ ಮಾಡಲು ಸೌಲಭ್ಯವನ್ನು ಒದಗಿಸುವುದು.”.

7. <u>5ನೇ ವಿಭಾಗದ ತಿದ್ದುಪಡಿ.</u>—ಪ್ರಧಾನ ಅಧಿನಿಯಮದ ವಿಭಾಗ 5ರಲ್ಲಿ ಉಪ-ವಿಭಾಗ (3)ರ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

“(4) ಆಶ್ರಯದಾತನು ಉನ್ನತ ವಿದ್ಯಾಭ್ಯಾಸ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದ ಯಾವುದೇ ವಿಷಯವನ್ನು ತಾನು ಸೂಕ್ತವೆಂದು ಭಾವಿಸುವ ರೀತಿಯಲ್ಲಿ ಪರಿಷತ್ತಿನ ತಜ್ಞರ ಅಭಿಪ್ರಾಯಕ್ಕಾಗಿ ಕಳುಹಿಸಬಹುದು.”.

8. <u>6ನೇ ವಿಭಾಗದ ತಿದ್ದುಪಡಿ.</u>—ಪ್ರಧಾನ ಅಧಿನಿಯಮದ ವಿಭಾಗ 6ರಲ್ಲಿ ಉಪ-ವಿಭಾಗ (3)ರ ನಂತರ, ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(4) ಸಂದರ್ಶಕನು ಉನ್ನತ ವಿದ್ಯಾಭ್ಯಾಸ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದ ಯಾವುದೇ ವಿಷಯವನ್ನು ತಾನು ಸೂಕ್ತವೆಂದು ಭಾವಿಸುವ ರೀತಿಯಲ್ಲಿ ಪರಿಷತ್ತಿನ ತಜ್ಞರ ಅಭಿಪ್ರಾಯಕ್ಕಾಗಿ ಕಳುಹಿಸಬಹುದು.".

9. 9ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ ವಿಭಾಗ 9ರ ಉಪ-ವಿಭಾಗ (3)ರಲ್ಲಿ "ನಿರ್ಧರಿಸಬಹುದಾದಂತಹ" ಎಂಬ ಪದಗಳ ನಂತರ "ಅಥವಾ ವೈಸ್-ಚೇರ್‌ಮ್ಯಾನ್ ಕಾಲಕಾಲಕ್ಕೆ ನಿಯೋಜಿಸುವಂತಹ" ಎಂಬ ಪದಗಳನ್ನು ಸೇರಿಸತಕ್ಕದ್ದು.

10. 10ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ ವಿಭಾಗ 10ರ ಉಪ-ವಿಭಾಗ (4)ರಲ್ಲಿ "ನಿರ್ಧರಿಸಬಹುದಾದಂತಹ" ಎಂಬ ಪದಗಳ ನಂತರ "ಅಥವಾ ಉಪಸಭಾಧ್ಯಕ್ಷರು ಕಾಲಕಾಲಕ್ಕೆ ನಿಯೋಜಿಸುವಂತಹ" ಎಂಬ ಪದಗಳನ್ನು ಸೇರಿಸತಕ್ಕದ್ದು.

11. 11ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ ವಿಭಾಗ 11ರ ಉಪ-ವಿಭಾಗ (2)ರಲ್ಲಿ,—

(i) "ಪುನಃ ರಚಿಸತಕ್ಕದ್ದು" ಎಂಬ ಪದಗಳ ನಂತರ "ಏಕಕಾಲದಲ್ಲಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) ಪರಿಷತ್ತಿನಲ್ಲಿ "ಅವುಗಳು ಮುಂದಿನ ಆರು ತಿಂಗಳಿಗೆ ಅಥವಾ ಅವುಗಳ ಪುನರ್ ರಚನೆಯವರೆಗೆ, ಯಾವುದು ಮೊದಲು ಬರುವುದೋ ಅಲ್ಲಿಯವರೆಗೆ, ಅಧಿಕಾರದಲ್ಲಿ ಮುಂದುವರಿಯತಕ್ಕದ್ದು" ಎಂಬ ಪದಗಳ ಜಾಗದಲ್ಲಿ "ಅವುಗಳ ಪುನರ್ ರಚನೆಯವರೆಗೆ ಅಧಿಕಾರದಲ್ಲಿ ಮುಂದುವರಿಯತಕ್ಕದ್ದು" ಎಂಬ ಪದಗಳನ್ನು ಬದಲಿಯಾಗಿ ಸೇರಿಸತಕ್ಕದು.

12. 12ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದಲ್ಲಿ,—

(i) ಐಟಮ್ (ಕೆ)ಯ ಜಾಗದಲ್ಲಿ, ಈ ಕೆಳಗಿನ ಐಟಮ್‌ನ್ನು ಬದಲಿಯಾಗಿ ಸೇರಿಸತಕ್ಕದ್ದು, ಅದೇನೆಂದರೆ:—

"(ಕೆ) ಸರಕಾರವು ನಾಮನಿರ್ದೇಶ ಮಾಡುವ ಅನ್ಯರಾಜ್ಯದ ಅಧಿನಿಯಮದ ಪ್ರಕಾರ ಸ್ಥಾಪಿಸಲ್ಪಟ್ಟ ಕೇರಳ ರಾಜ್ಯದ ಹೊರಗಿರುವಂತಹ ಒಂದು ವಿಶ್ವವಿದ್ಯಾಲಯದ ಒಬ್ಬ ಕುಲಪತಿ".

(ii) ಐಟಮ್ (ಎಬಿ)ಯ ನಂತರ ಈ ಕೆಳಗಿನ ಐಟಮ್‌ಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಎಸಿ) ಸರಕಾರವು ನಾಮನಿರ್ದೇಶ ಮಾಡುವ ಕೇರಳ ರಾಜ್ಯದ ಹೊರಗಿರುವಂತಹ ಒಂದು ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಒಬ್ಬ ಚೇರ್‌ಮ್ಯಾನ್ ಅಥವಾ ವೈಸ್ ಚೇರ್‌ಮ್ಯಾನ್;

(ಎಡಿ) ಸರಕಾರವು ನಾಮನಿರ್ದೇಶ ಮಾಡುವ ರಾಜ್ಯದ ಹೊರಗಿರುವ ಒಂದು ಕೇಂದ್ರೀಯ ವಿಶ್ವವಿದ್ಯಾಲಯದ ಒಬ್ಬ ಕುಲಪತಿ;".

13. 14ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ ವಿಭಾಗ 14ರಲ್ಲಿ, ಐಟಮ್ (ಆರ್)ನ ನಂತರ ಈ ಕೆಳಗಿನ ಐಟಮ್‌ಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಎಸ್) ಪದವಿಯಲ್ಲಿ ಜಂಟಿ ಕಾರ್ಯದರ್ಶಿಗಿಂತ ಕಡಿಮೆಯಲ್ಲದಂತಹ ಭಾರತ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಒಬ್ಬ ನಾಮಿನಿ;

(ಟಿ) ರಾಜ್ಯ ಯೋಜನಾ ನಿರ್ದೇಶಕ, ಆರ್‌ಯುಎಸ್‌ಎ; ಅಫೀಲಿಯೇಟ್ ಮಾಡಲ್ಪಟ್ಟ ಕಾಲೇಜಿನ ಒಬ್ಬ ಪ್ರಾಂಶುಪಾಲ;

(ಯು) ಸರಕಾರದಿಂದ ನಾಮನಿರ್ದೇಶಿಸಲ್ಪಟ್ಟ ಅಫೀಲಿಯೇಟ್ ಮಾಡಲ್ಪಟ್ಟ ಕಾಲೇಜಿನ ಒಬ್ಬ ಪ್ರಾಂಶುಪಾಲ;

(ವಿ) ಸರಕಾರದಿಂದ ನಾಮನಿರ್ದೇಶಿಸಲ್ಪಟ್ಟ ವಿಶ್ವವಿದ್ಯಾಲಯ ಅಥವಾ ಕಾಲೇಜಿನ ಒಬ್ಬ ಅಧ್ಯಾಪಕೇತರ ಸಿಬ್ಬಂದಿ.".

14. 15ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 15ನೇ ವಿಭಾಗದ ಖಂಡ (ಕೆ)ಯಲ್ಲಿ,—

(i) "ಸಭೆ ಸೇರತಕ್ಕದ್ದು" ಎಂಬ ಪದಗಳ ನಂತರ "ಒಂದು ವರ್ಷದಲ್ಲಿ ಕನಿಷ್ಟ ಪಕ್ಷ ಎರಡು ಸಲ ಮತ್ತು" ಎಂಬ ಪದಗಳನ್ನು ಸೇರಿಸತಕ್ಕದು;

(ii) "ಆದರೆ ಅದು ವರ್ಷದಲ್ಲಿ ಎರಡು ಸಲವಾದರೂ ಸಭೆ ಸೇರತಕ್ಕದ್ದಾಗಿದೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

15. 17ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 17ನೇ ವಿಭಾಗದಲ್ಲಿ (ಸಿ) ಖಂಡದ ಜಾಗದಲ್ಲಿ ಈ ಕೆಳಗಿನ ಖಂಡಗಳನ್ನು ಬದಲಿಯಾಗಿ ಸೇರಿಸತಕ್ಕದ್ದು, ಅದೇನೆಂದರೆ:—

“(ಸಿ) ಅದು ತನ್ನ ಸದಸ್ಯರಲ್ಲಿ ಒಬ್ಬನನ್ನು ಪ್ರತಿಯೊಂದು ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ತಿಗೆ ನಾಮನಿರ್ದೇಶ ಮಾಡತಕ್ಕದ್ದು.”.

16. 20ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 20ನೇ ವಿಭಾಗದ ಉಪ-ವಿಭಾಗ (1)ರಲ್ಲಿ, ಮೊದಲ ಷರತ್ತಿನಲ್ಲಿ “ಒಂದು ಆರು ತಿಂಗಳ ಕಾಲವಧಿಯ ತನಕ ಅಥವಾ” ಎಂಬ ಪದಗಳನ್ನು ಮತ್ತು “ಅದರಲ್ಲಿ ಯಾವುದು ಮೊದಲೋ ಅಲ್ಲಿಯ ತನಕ” ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

17. 25ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 25ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿ “ವಿಶ್ವವಿದ್ಯಾನಿಲಯ ಅನುದಾನ ಆಯೋಗ” ಎಂಬ ಪದಗಳ ನಂತರ “ಆರ್‌ಯುಎಸ್‌ಎ” ಎಂಬ ಪದವನ್ನು ಸೇರಿಸತಕ್ಕದ್ದು.

18. ಅಸ್ತಿತ್ವದಲ್ಲಿರುವ ಆಡಳಿತ ಪರಿಷತ್ತಿಗೆ ಸಂಬಂಧಿಸಿದ ವಿಶೇಷ ಉಪಬಂಧ.—ಪ್ರಧಾನ ಅಧಿನಿಯಮದಲ್ಲಿ ಏನೇ ಒಳಗೊಂಡಿರಲಿ, 2017ರ ಕೇರಳ ರಾಜ್ಯ ಉನ್ನತ ವಿದ್ಯಾಭ್ಯಾಸ ಪರಿಷತ್ತು (ತಿದ್ದುಪಡಿ) ಅಧ್ಯಾದೇಶ ಜಾರಿಗೆ ಬಂದ ದಿನಾಂಕದಂದು ಮತ್ತು ಅನಂತರ, ಅಸ್ತಿತ್ವದಲ್ಲಿರುವ ಆಡಳಿತ ಪರಿಷತ್ತು ರದ್ದಾಗಿರಲ್ಪಡುತ್ತದೆ ಹಾಗೂ ಹಾಗೇ ರದ್ದುಗೊಳಿಸಲ್ಪಟ್ಟ ಮೇಲೆ ಆ ಆಡಳಿತ ಪರಿಷತ್ತಿನ ಎಲ್ಲಾ ಸದಸ್ಯರುಗಳು ತಮ್ಮ ಕಛೇರಿಗಳನ್ನು ತೆರವುಗೊಳಿಸಿದ್ದಾರೆಂದು ಭಾವಿಸತಕ್ಕದ್ದು.

19. ರದ್ಧತಿ ಮತ್ತು ರಕ್ಷಣೆ.—(1) 2017ರ ಕೇರಳ ರಾಜ್ಯ ಉನ್ನತ ವಿದ್ಯಾಭ್ಯಾಸ ಪರಿಷತ್ತು (ತಿದ್ದುಪಡಿ) ಅಧ್ಯಾದೇಶ (2017ರ 37)ವನ್ನು ಈ ಮೂಲಕ ರದ್ದುಗೊಳಿಸಲಾಗಿದೆ.

(2) ಆ ರೀತಿ ರದ್ದುಗೊಳಿಸಿದ್ದರೂ, ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿ ಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಅಥವಾ ಮಾಡಿರುವುದಾಗಿ ಭಾವಿಸಲ್ಪಟ್ಟ ಯಾವುದೇ ಕಾರ್ಯ ಅಥವಾ ಕೈಗೊಂಡ ಅಥವಾ ಕೈಗೊಂಡಿರುವುದಾಗಿ ಭಾವಿಸಲ್ಪಟ್ಟ ಯಾವುದೇ ಕ್ರಮವು ಈ ಅಧ್ಯಾದೇಶದ ಪ್ರಕಾರ ತಿದ್ದುಪಡಿಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

**ಪಿ. ಸದಾಶಿವಮ್,**

ರಾಜ್ಯಪಾಲರು.